(ಇಂದು ದಿನಾಂಕಃ 02–04–2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ವಿ.ಎಂ.ಕೆ. ವಕೀಲರಿಂದಃ**

ನಾನು ಹೇಳಲಾದ ಅಪಘಾತ ರಾಜ್ಯ ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಆ ದಿನ ಮಂಚಿಕೇರಿಯಿಂದ ಯಲ್ಲಾಪುರಕ್ಕೆ ಹೋಗುತ್ತಿದ್ದೆವು ಎಂದರೆ ಸರಿ.ಅರ್ಜಿದಾರ ಹಿಂಬದಿ ಸವಾರನಾಗಿದ್ದನು. ದ್ವಿಚಕ್ರ ವಾಹನವನ್ನು ನಾನೇ ನಡೆಸುತ್ತಿದ್ದೆ ಎಂದರೆ ಸರಿ. ನಾನು ದ್ವಿಚಕ್ರ ವಾಹನವನ್ನು

ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಇಂಡಿಕಾ ಕಾರಿಗೆ ನಾನು ತಪ್ಪು ದಿಕ್ಕಿನಲ್ಲಿ ಬಂದು ಇಂಡಿಕಾ ಕಾರಿಗೆ ಡಿಕ್ಕಿ ಹೊಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಇಂಡಿಕಾ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂಡಿಕಾ ಕಾರಿನ ಚಾಲಕ ಜಾಗರೂಕತೆಯಿಂದ ರಸ್ತೆ ನಿಯಮಗಳನ್ನು ಪಾಲಿಸಿ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇಂಡಿಕಾ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಅನ್ನುವುದು ಸರಿಯಲ್ಲ. ನಾನು ದ್ವಿಚಕ್ರ ವಾಹನವನ್ನು ಸರಿಯಾಗಿ ಚಾಲನೆ ಮಾಡಿಕೊಂಡು ಹೋಗಿದ್ದರೆ ಅಪಘಾತವಾಗುತ್ತಿರಲಿಲ್ಲ ಅನ್ನುವುದು ಸರಿಯಲ್ಲ. ರವಿ ಸಿದ್ಧಿ ಇವರು ಪ್ರಥಮ ವರ್ತಮಾನ ಹೇಳಿಕೆ ಸಲ್ಲಿಸಿದ್ದು ಸದರಿಯವರು ನನ್ನ ಸಂಬಂಧಿಕರು ಎಂದರೆ ಸರಿ. ರವಿ ಸಿದ್ಧಿ ಇವರ ಮುಖಾಂತರ ಸುಳ್ಳು ಪ್ರಥಮ ವರ್ತಮಾನ ಹೇಳಿಕೆಯನ್ನು ಇಂಡಿಕಾ ಕಾರಿನ ಚಾಲಕನ ವಿರುದ್ಧ ಕೊಡಿಸಿದ್ದೇನೆ ಅನ್ನುವುದು ಸರಿಯಲ್ಲ. ದ್ವಿಚಕ್ರ ವಾಹನ ಚಾಲನೆ ಮಾಡಲು ನನಗೆ ಚಾಲನಾ ಪರವಾನಿಗೆ ಇರದೇ ಇದ್ದುದರಿಂದ ನಾನು ಚಾಲನಾ ಪರವಾನಿಗೆಯನ್ನು ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ.

ಅರ್ಜಿದಾರನಿಗೆ ಆದಂತಹ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದರಿಂದ ಯಾವುದೇ ಅಂಗನ್ಯೂನತೆ ಇಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ಅಪಘಾತವಾಗಿದ್ದರಿಂದ ಶಾಲೆಗೆ ಹೋಗಲು ಆಗದೇ ಇದ್ದುದರಿಂದ ಶಾಲೆಗೆ ಹೋಗುವುದು ತಪ್ಪಿತು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಅಪಘಾತದಿಂದ ಅರ್ಜಿದಾರನ ವಿದ್ಯಾಭ್ಯಾಸಕ್ಕೆ ಯಾವುದೇ ಅಡೆತಡೆ ಆಗಿಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ತಲೆ ಸುತ್ತುವಂತಹ, ತಲೆ ನೋವು ಮತ್ತು ಜ್ಞಾಪಕ ಶಕ್ತಿ ನಷ್ಟವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಅರ್ಜಿದಾರನು ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದಾನೆ. ಅರ್ಜಿದಾರನು ಅಂಗನ್ಯೂನತಾ ಪ್ರಮಾಣಪತ್ರವನ್ನು ಹುಬ್ಬಳ್ಳಿ ಆಸ್ಪತ್ರೆಯಿಂದ ತೆಗೆದುಕೊಂಡಿದ್ದಾನೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಮಂಗಳೂರು ಆಸ್ಪತ್ರೆಯಲ್ಲಿ ಕೊಡುವುದಿಲ್ಲ ಎಂದು ಹೇಳಿದ್ದರಿಂದ ಅಲ್ಲಿ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನತೆ ಇಲ್ಲದ್ದರಿಂದ ಮಂಗಳೂರು ಆಸ್ಪತ್ರೆಯಲ್ಲಿ ಅಂಗನ್ಯೂನತಾ ಪ್ರಮಾಣಪತ್ರ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರ ಹುಬ್ಬಳ್ಳಿ ಆಸ್ಪತ್ರೆಯಿಂದ ಸುಳ್ಳು ಅಂಗ ನ್ಯೂನತಾ ಪ್ರಮಾಣಪತ್ರವನ್ನು ಹೆಚ್ಚಿಗೆ ಪರಿಹಾರ ಧನ ಪಡೆಯಲು ಪಡೆದುಕೊಂಡಿದ್ದಾನೆ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನತೆ ಇಲ್ಲ ಅನ್ನುವುದು ಸರಿಯಲ್ಲ.

ಇಂಡಿಕಾ ಕಾರ್ ಅಪಘಾತದ ದಿನಾಂಕದಂದು 2 ನೇ ಎದುರುದಾರರ ಕಂಪನಿಯಿಂದ ವಿಮೆ ಬಂದಿರಲಿಲ್ಲ ಅನ್ನುವುದು ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ಇಂಡಿಕಾ ಕಾರಿನ ಚಾಲಕನಿಗೆ ಸಂಬಂಧಪಟ್ಟಂತೆ ಚಾಲನಾ ಪರವಾನಿಗೆ ಹಾಜರುಪಡಿಸಿಲ್ಲ ಎಂದರೆ ಸರಿ. ಇಂಡಿಕಾ ಕಾರಿನ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇಲ್ಲದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ.

ನಿ.ಪಿ.10 ರ ಅನುಕ್ರಮ ಸಂಖ್ಯೆ 26 ರ ರಶೀದಿ ಕೇವಲ ಮಾಹಿತಿ ಇದ್ದು ವೈದ್ಯಕೀಯ ಬಿಲ್ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಅನುಕ್ರಮ ಸಂಖ್ಯೆ 33 ರ ಬಿಲ್ ಈಗಾಗಲೇ ಹಾಜರು ಮಾಡಿದ್ದು ಅದೇ ಬಿಲ್ಲನ್ನು ಇನ್ನೊಮ್ಮೆ ಹಾಜರುಪಡಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ. 10 ರ ಬಿಲ್‌ಗಳನ್ನು ಹೆಚ್ಚಿನ ಪರಿಹಾರ ಧನ ಬರಲಿ ಎಂದು ಸೃಷ್ಠಿ ಮಾಡಿಕೊಂಡು ಹಾಜರುಪಡಿಸಿದ್ದೇವೆ ಅನ್ನುವುದು ಸರಿಯಲ್ಲ. ಅರ್ಜಿದಾರನು ಕೇಳಿರುವ ಪರಿಹಾರ ಧನ ಪಡೆಯಲು ಅರ್ಹನಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರ

ನನ್ನನ್ನು ಮತ್ತು ನನ್ನ ದ್ವಿಚಕ್ರ ವಾಹನದ ವಿಮಾ ಕಂಪನಿಯನ್ನು ಪಕ್ಷಗಾರನನ್ನಾಗಿ ಮಾಡಬೇಕಾಗಿತ್ತು, ಮಾಡದೇ ಇರುವುದರಿಂದ ಈ ಅರ್ಜಿ ಊರ್ಜಿತವಾಗುವುದಿಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ